ಕರ್ನಾಟಕ ಸರ್ಕಾರ

ಸಮಗ್ರ ಮಕ್ಕಳ ರಕ್ಷಣಾ ಯೋಜನೆ

ಕರ್ನಾಟಕ ರಾಜ್ಯ ಸಮಗ್ರ ಮಕ್ಕಳ ರಕ್ಷಣಾ ಸೊಸೈಟಿ

C/o, ನಿರ್ದೇಶನಾಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಒಂದನೇ ಮಹಡಿ, ಬಹು ಮಹಡಿಗಳ ಕಟ್ಟಡ, ಡಾ॥ ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560 001.

E-mail ID: icpssarakar@gmail.com Ph.No.080-22879382

ಸಂಖ್ಯೆ: ಐಸಿಪಿಎಸ್/ದತ್ತು-19/2018-19

ದಿನಾಂಕ:04-08-2019

:: ಸುತ್ತೋಲೆ ::

ವಿಷಯ: ಮಕ್ಕಳ ಸಹಾಯವಾಣಿ 1098ಗೆ ಸಂಬಂಧಿಸಿದ ಮಾಹಿತಿಗಳನ್ನು ಎಲ್ಲಾ ಮಕ್ಕಳ ಪಾಲನಾ ಕೇಂದ್ರದಲ್ಲಿ ಅಳವಡಿಸುವ ಬಗ್ಗೆ.

ಉಲ್ಲೇಖ: ದಿನಾಂಕ: 30.11.2018 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಯಂತೆ.

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ತೊಂದರೆಯಲ್ಲಿರುವ ಮಕ್ಕಳಿಗೆ ಮಕ್ಕಳ ಸಹಾಯವಾಣಿಯು 24 ಗಂಟೆಗಳ ಉಚಿತ, ಉಪಚಾರ ಮತ್ತು ಸಂರಕ್ಷಣೆಯನ್ನು ಒದಗಿಸುವುದರೊಂದಿಗೆ 1098 ತುರ್ತು ಸಂಪರ್ಕ ದೂರವಾಣಿ ಸೇವೆಯಾಗಿದೆ. ಅಲ್ಲದೆ ಭಾರತದ ಯಾವುದೇ ದೂರವಾಣಿ ಸೇವೆಯಿಂದ ಸಂಕಷ್ಟದಲ್ಲಿರುವ ಮಗು ಅಥವಾ ಕಾಳಜಿ ಹೊಂದಿದ ದೊಡ್ಡವರು 1098 ಕ್ಕೆ ಉಚಿತವಾಗಿ ಕರೆ ಮಾಡಿದಾಗ ಚೈಲ್ಡ್ ಲೈನ್ ಗುಂಪು ಮಗುವಿನ ನೆರವಿಗೆ ಧಾವಿಸಿ, ಮಗುವಿಗೆ ಪುನರ್ವಸನ ಹಾಗೂ ನಿರಂತರ ಅನುಸರಣೆಯನ್ನು ಒದಗಿಸಲಾಗುತ್ತದೆ. ಆದ್ದರಿಂದ ಸಂಕಷ್ಟದಲ್ಲಿರುವ ಮಕ್ಕಳಿಗೆ ನೆರವಾಗಲು 1098ಗೆ ಕರೆ ಮಾಡಿ ಮಾಹಿತಿಯನ್ನು ನೀಡುವ ಸಂಬಂಧ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಚೈಲ್ಡ್‌ಲೈನ್ ಮಾಹಿತಿಯನ್ನು ಪ್ರದರ್ಶಿಸುವುದರ ಮೂಲಕ ತುರ್ತು ಸೇವೆ ಅಗತ್ಯವಿರುವ ಮಕ್ಕಳು ನೆರವನ್ನು ಪಡೆಯಲು ನೆರವಾಗುತ್ತದೆ. ಈ ಸಂಬಂಧ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಚೈಲ್ಡ್‌ಲೈನ್ ಮಾಹಿತಿಯನ್ನು ಪ್ರದರ್ಶಿಸಲು ಕೋರಿದೆ. (ಪ್ರದರ್ಶಿಸಬೇಕಾದ ಚೈಲ್ಡ್‌ಲೈನ್ ಮಾಹಿತಿಯ ಮಾದರಿಯನ್ನು ಈ ಪತ್ರದೊಂದಿಗೆ ಲಗತ್ತಿಸಿದೆ)

14/8/19

ನಿರ್ದೇಶಕರು,
ಸಮಗ್ರ ಮಕ್ಕಳ ರಕ್ಷಣಾ ಯೋಜನೆ,
ಬೆಂಗಳೂರು.

ಪ್ರತಿಯನ್ನು

1) ಸರ್ಕಾರದ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು ರವರಿಗೆ ಮಾಹಿತಿಗಾಗಿ
2) **Head, South Regional Resource Cener Child Line India Foundtion, T.Nagar, Chennai-600017.**
3) ಎಲ್ಲಾ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಿಗೆ ಕಳುಹಿಸುತ್ತಾ, ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಗೋಡೆ ಬರಹದ ಮೂಲಕ ಬರೆಸಿ ಕ್ರಮ ಕೈಗೊಳ್ಳುವುದು.
4) ಅಧ್ಯಕ್ಷರು, ಮಕ್ಕಳ ಕಲ್ಯಾಣ ಸಮಿತಿ, ಎಲ್ಲಾ ಜಿಲ್ಲೆಗಳು
5) ಕಛೇರಿ ಪ್ರತಿ